ಮಾನವಸಂಪನ್ಮೂಲವಿಭಾಗ/मानवसंसाधनअनुभाग/**HUMAN RESOURCES SECTION**
ಭಾರತೀಯವಿಜ್ಞಾನಸಂಸ್ಥೆ/भारतीयविज्ञानसंस्थान/**INDIAN INSTITUTE OF SCIENCE**
ಬೆಂಗಳೂರು/**बेंगलूर/BANGALORE – 560012**
ದೂರವಾಣಿ/**दूरभाष/TELEPHONE : 2293 2231 / 2232 / 2941**
ಇ-ಮೇಲ್/E-mail/ईमेल : **office.hr@iisc.ac.in**

# ತಾಂತ್ರಿಕ ಸಹಾಯಕ ಹುದ್ದೆಗಳಿಗೆ ಅಧಿಸೂಚನೆ

**ಜಾಹೀರಾತು ಸಂಖ್ಯೆ:** ಆರ್/(ಎಚ್ಆರ್)/ನೇಮಕಾತಿ-2/2022

**ಹುದ್ದೆಗಳ ಸಂಖ್ಯೆ :** 100 (ಸಾಮಾನ್ಯ-42, ಒಬಿಸಿ-25, ಎಸ್ ಸಿ-16, ಎಸ್ ಟಿ-7, ಆರ್ಥಿಕ ದುರ್ಬಲ ವರ್ಗ-10)

ದಿವ್ಯಾಂಗ ವ್ಯಕ್ತಿಗಳಿಗೆ 4 ಹುದ್ದೆಗಳನ್ನು ಕಾಯ್ದಿರಿಸಲಾಗಿದೆ, ತಲಾ ಎರಡು ಎಚ್.ಎಚ್ ಮತ್ತು ಒಎಚ್.

**ಶೈಕ್ಷಣಿಕ ಅರ್ಹತೆಗಳು:** ಕನಿಷ್ಠ 55% ಅಂಕಗಳೊಂದಿಗೆ ಬಿ.ಟೆಕ್/ ಬಿ.ಇ/ ಬಿ. ಆರ್ಕಿಟೆಕ್ಚರ್/ ಬಿಎಸ್ ಸಿ./ ಬಿಸಿಎ/ ಬಿವಿಎಸ್ ಸಿ

ಯಾವುದೇ ಪರೀಕ್ಷೆ/ಪದವಿಗಳಲ್ಲಿ, ಅಭ್ಯರ್ಥಿಗಳು ಅಂಕಗಳ ಬದಲಿಗೆ ಗ್ರೇಡ್‌ಗಳನ್ನು ಪಡೆದಿದ್ದರೆ, ಅಂತಹ ಅಭ್ಯರ್ಥಿಗಳು ತಮ್ಮ ವಿಶ್ವವಿದ್ಯಾಲಯ/ಸಂಸ್ಥೆಗೆ ನಿಗದಿಯಾದ ಪರಿವರ್ತನೆ ಸೂತ್ರದ ಆಧಾರದ ಮೇಲೆ ಗ್ರೇಡ್‌ಗಳನ್ನು ಅಂಕಗಳಾಗಿ ಪರಿವರ್ತಿಸಬೇಕು ಮತ್ತು ಅರ್ಜಿ ನಮೂನೆಯಲ್ಲಿ ಅದನ್ನು ಭರ್ತಿ ಮಾಡಬೇಕು.

**ವಯೋಮಿತಿ:** 28.02.2022ಕ್ಕೆ ಅನ್ವಯವಾಗುವಂತೆ 26 ವರ್ಷಗಳು.

ಎಸ್‌ಸಿ/ಎಸ್‌ಟಿಗೆ 5 ವರ್ಷ, ಒಬಿಸಿಗೆ 3 ವರ್ಷ, ದಿವ್ಯಾಂಗರಿಗೆ 10 ವರ್ಷ ವಯೋಮಿತಿ ಸಡಿಲಿಕೆ ನೀಡಲಾಗುತ್ತದೆ, ಮಾಜಿ ಸೈನಿಕರಿಗೆ ಸೇವೆಯ ವರ್ಷಗಳು + 3 ವರ್ಷಗಳ ವಿನಾಯಿತಿ.

ನಿಗದಿತ ಮಾನದಂಡದ ಅನುಸಾರ ಅಂಗವೈಕಲ್ಯ ಹೊಂದಿರುವ ಅಭ್ಯರ್ಥಿಗಳಿಗೆ ಸಂಚಿತ ವಯಸ್ಸಿನ ಸಡಿಲಿಕೆಗೆ ಅನುಮತಿಸಲಾಗಿರುತ್ತದೆ. ಜೊತೆಗೆ SC, ST ಮತ್ತು OBC ಗಳಿಗೆ ಲಭ್ಯವಿರುವ ವಯೋಮಿತಿ ಸಡಿಲಿಕೆಯನ್ನು ಅವರಿಗೆ ಕಾಯ್ದಿರಿಸಲಾಗಿರುತ್ತದೆ.

ಸಂಸ್ಥೆಯಲ್ಲಿ ಮೂರು ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿರುವ, ಸಂಸ್ಥೆಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ತಾತ್ಕಾಲಿಕ/ಪ್ರಾಜೆಕ್ಟ್‌ಗಳ ಸಿಬ್ಬಂದಿಗೆ ಅವರ ಸೇವೆಯ ಮಟ್ಟಿಗೆ ಒಂದು-ಬಾರಿ ವಿನಾಯಿತಿಯನ್ನು ಒದಗಿಸಲಾಗಿದೆ.

ವೇತನ ಪಾವತಿ ಮ್ಯಾಟ್ರಿಕ್ಸ್ ಹಂತ ಮತ್ತು ವೇತನ : ಹಂತ 3 -ಮೂಲ ವೇತನ ರೂ.21700 (ಸೆಲ್ 1) ಹಾಗೂ ಸಂಸ್ಥೆಯಲ್ಲಿ ಚಾಲ್ತಿಯಲ್ಲಿರುವ ದರಗಳ ಪ್ರಕಾರ ಭತ್ಯೆಗಳು.

**ಆಯ್ಕೆ ವಿಧಾನ**

ಆಯ್ಕೆ - ಕೇವಲ ಉದ್ಯೋಗ ಆಧಾರಿತ ಯೋಗ್ಯತಾ ಪರೀಕ್ಷೆಯ ಅನುಸಾರ. (ಶೇಕಡ 100ರಷ್ಟು ವೇಯ್ಟ್ ಏಜ್).

ಲಿಖಿತ ಆಪ್ಟಿಟ್ಯೂಡ್ ಪರೀಕ್ಷೆಯು ಕಂಪ್ಯೂಟರ್ ಆಧಾರಿತ ಎಂಸಿಕ್ಯು ಪರೀಕ್ಷೆಯಾಗಿದೆ. ಪರೀಕ್ಷೆ ಮತ್ತು ಪಠ್ಯಕ್ರಮದ ಯೋಜನೆಯು ಅನುಬಂಧ-ರಲ್ಲಿದೆ. ಅಭ್ಯರ್ಥಿಗಳು ಆನ್‌ಲೈನ್ ಅಪ್ಲಿಕೇಶನ್‌ನಲ್ಲಿ ಪತ್ರಿಕೆ-ಬಿ ಅಡಿಯಲ್ಲಿ ಎರಡು ಆಯ್ಕೆಗಳನ್ನು ನವೀಕರಿಸಬೇಕಾಗುತ್ತದೆ. ಉತ್ತರವನ್ನು ಒಮ್ಮೆ ಆಯ್ಕೆ ಮಾಡಿದ ನಂತರ, ಯಾವುದೇ ಸಂದರ್ಭಗಳಲ್ಲಿ ಆಯ್ಕೆಗಳನ್ನು ಬದಲಾಯಿಸಲಾಗುವುದಿಲ್ಲ.

**ಶುಲ್ಕಗಳು:**

ಸಾಮಾನ್ಯ, ಇತರೆ ಹಿಂದುಳಿದ (ಒಬಿಸಿ) ಮತ್ತು ಆರ್ಥಿಕ ದುರ್ಬಲ ವರ್ಗ (ಇ ಡಬ್ಲ್ಯೂ ಎಸ್) ಅಭ್ಯರ್ಥಿಗಳಿಗೆ - ರೂ. 500/-

ಮಹಿಳಾ ಅಭ್ಯರ್ಥಿಗಳು ಮತ್ತು ಎಸ್‌ಸಿ, ಎಸ್ ಟಿ, ಪಿಡಬ್ಲ್ಯೂಡಿ, ಲಿಂಗಪರಿವರ್ತಿತ ವರ್ಗಕ್ಕೆ ಸೇರಿದ ಮತ್ತು ಮಾಜಿ ಸೈನಿಕ ಅಭ್ಯರ್ಥಿಗಳು - ಯಾವುದೇ ಶುಲ್ಕ ಇಲ್ಲ.

ಒಮ್ಮೆ ಪಾವತಿಸಿದ ಶುಲ್ಕವನ್ನು ಮರು ಪಾವತಿಸಲಾಗುವುದಿಲ್ಲ.

**ನಿಯಮಗಳು ಮತ್ತು ಷರತ್ತುಗಳು:**

1. ಅಭ್ಯರ್ಥಿಯು ಭಾರತದ ಪ್ರಜೆಯಾಗಿರಬೇಕು.
2. ನೇಮಕಾತಿಗಳು ನಿಯಮಿತ ಆಧಾರದ ಮೇಲೆ 2 ವರ್ಷಗಳ ಪ್ರಶಿಕ್ಷಣಾರ್ಥಿ (ಪ್ರೊಬೆಷನರಿ) ಅವಧಿಯೊಂದಿಗೆ ಇರಲಿದೆ; ನೇಮಕಗೊಂಡವರ ಸೇವೆಯು ನಿವೃತ್ತಿಯ ವಯಸ್ಸನ್ನು ತಲುಪುವ ತಿಂಗಳ ಕೊನೆಯ ದಿನದ ಅಂತ್ಯದವರೆಗೆ ಇರಲಿದೆ.
3. ತಾಂತ್ರಿಕ ಸಹಾಯಕರ ಹುದ್ದೆಯು ದಿವ್ಯಾಂಗ ಅಭ್ಯರ್ಥಿಗಳಿಗೆ ಸೂಕ್ತವಾಗಿರಲಿದೆ. ಒಂದು ಕಾಲು ಊನಗೊಂಡಿರುವುದು (OH ವರ್ಗ) ಮತ್ತು ಶ್ರವಣ ದೋಷ (HH) ಇತ್ಯಾದಿ.
4. ವಯೋಮಿತಿ ಮತ್ತು ವಿದ್ಯಾರ್ಹತೆಗಳಲ್ಲಿನ ಸಡಿಲಿಕೆಗಳು ಸಂಸ್ಥೆಗೆ ಅನ್ವಯವಾಗುವಂತೆ ಭಾರತ ಸರ್ಕಾರದ ನಿಯಮಗಳ ಪ್ರಕಾರ ದೈಹಿಕವಾಗಿ ಸವಾಲಾಗಿರುವ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಅನ್ವಯಿಸುತ್ತದೆ.
5. ಅರ್ಹತೆಗೆ ಬೆಂಬಲವಾಗಿ ಅಂಕಪಟ್ಟಿಗಳು ಮತ್ತು ಪ್ರಮಾಣಪತ್ರಗಳನ್ನು ಅಪ್‌ಲೋಡ್ ಮಾಡಬೇಕು; ಮತ್ತು ಸಲ್ಲಿಸಬೇಕು (10 ನೇ ತರಗತಿಯಿಂದ ಆರಂಭಿಸಿ), ಅಗತ್ಯ ಅರ್ಹತಾ ಪದವಿಯಲ್ಲಿ ಅವರು ಪಡೆದ ಅಂಕಗಳು, ಜಾತಿ, ಅನುಭವ ಇತ್ಯಾದಿಗಳು ಅರ್ಜಿ ನಮೂನೆಯೊಂದಿಗೆ ಕಡ್ಡಾಯವಾಗಿದೆ. ಈ ಲಗತ್ತುಗಳಿಲ್ಲದ ಅರ್ಜಿಗಳನ್ನು ತಿರಸ್ಕರಿಸಲಾಗುತ್ತದೆ. ಈ ವಿಚಾರದಲ್ಲಿ ಯಾವುದೇ ಹೆಚ್ಚಿನ ಪತ್ರ ವ್ಯವಹಾರವನ್ನು ಮಾಡಲಾಗುವುದಿಲ್ಲ.
6. ಪದವಿಗೆ ಸಂಬಂಧಿಸಿದಂತೆ ಸಿಜಿಪಿಎ/ಜಿಪಿಎ ವ್ಯವಸ್ಥೆಯ ಅಡಿಯಲ್ಲಿ ಪದವಿಗಳನ್ನು ಪಡೆದ ಅಭ್ಯರ್ಥಿಗಳು ಸಿಜಿಪಿಎ/ಜಿಪಿಎ ಅನ್ನು ಸೂಕ್ತ ಶೇಕಡಾವಾರುಗೆ ಪರಿವರ್ತಿಸಲು ವಿಶ್ವವಿದ್ಯಾಲಯ/ಸಂಸ್ಥೆಯ ಮಾರ್ಗಸೂಚಿಗಳ ಪ್ರಕಾರ ಪಡೆದ ಅಂಕಗಳ ಸರಿಯಾದ ಶೇಕಡಾವಾರು ಪ್ರಮಾಣವನ್ನು ಸಲ್ಲಿಸಬೇಕಿರುತ್ತದೆ. ಪ್ರಮಾಣಪತ್ರ ಪರಿಶೀಲನೆಯ ಸಮಯದಲ್ಲಿ ಅಂಕ ಪರಿವರ್ತನೆ ಸೂತ್ರಕ್ಕೆ ದಾಖಲೆಯ ಸಾಕ್ಷ್ಯವನ್ನು ಒದಗಿಸುವ ಜವಾಬ್ದಾರಿ ಅಭ್ಯರ್ಥಿಯ ಮೇಲಿರುತ್ತದೆ.
7. ಫಲಿತಾಂಶಗಳನ್ನು ಪ್ರಕಟಿಸುವ ಮೊದಲು ಅರ್ಜಿದಾರರು ಅರ್ಜಿ ನಮೂನೆಯಲ್ಲಿ ಭರ್ತಿ ಮಾಡಿದ ವಿವರಗಳನ್ನು ಸವಿವರವಾಗಿ ಪರಿಶೀಲಿಸಲಾಗುತ್ತದೆ. ಅಭ್ಯರ್ಥಿಗಳು ತಾವು ಭರ್ತಿ ಮಾಡಿದ ವಿವರಗಳಿಗೆ ಅಧಿಕೃತ ಸಾಕ್ಷ್ಯಗಳನ್ನು ಒದಗಿಸಲು ವಿಫಲವಾದರೆ, ಅವರ ಉಮೇದುವಾರಿಕೆಯನ್ನು ವಜಾ ಮಾಡಲಾಗುತ್ತದೆ.
8. 01.01.2004 ರ ಅಥವಾ ನಂತರ ಸಂಸ್ಥೆಯ ಸೇವೆಗೆ ನೇಮಕಗೊಂಡ ಎಲ್ಲಾ ಉದ್ಯೋಗಿಗಳು ಹೊಸ ಪಿಂಚಣಿ ಯೋಜನೆ (ಎನ್ ಪಿ ಎಸ್) ವ್ಯಾಪ್ತಿಗೆ ಬರುತ್ತಾರೆ.
9. ಸಂಸ್ಥೆಯ ಕೇಡರ್ ಮತ್ತು ನೇಮಕಾತಿ ನಿಯಮಗಳ ಪ್ರಕಾರ, ನೇರ ನೇಮಕಾತಿ ವಿಧಾನ ಅನುಸರಿಸಿದ ಸಂದರ್ಭದಲ್ಲಿ, ನಿರ್ದೇಶಕರ ವಿವೇಚನೆಯ ಮೇರೆಗೆ ಹುದ್ದೆಗಳನ್ನು ಪ್ರಭಾರ (ಡೆಪ್ಯುಟೇಶನ್) ಅಥವಾ ಗುತ್ತಿಗೆ ಮೂಲಕ ಭರ್ತಿ ಮಾಡಬಹುದು. ಸೇವೆಯ ಅವಧಿಯಲ್ಲಿ, ಪ್ರತಿಯೊಬ್ಬ ಉದ್ಯೋಗಿಯು ಯೋಜನೆ, ನಿಯಮಗಳು ಮತ್ತು ಬೈಲಾಗಳು (SRB), ಆಡಳಿತಾತ್ಮಕ ಕೈಪಿಡಿಗಳು, ಇತರ ಶಾಸನಬದ್ಧ ದಾಖಲೆಗಳು, CCS (ನಡಾವಳಿ) ನಿಯಮಗಳು ಮತ್ತು CCS (CCA) ನಿಯಮಗಳು ಇತ್ಯಾದಿಗಳನ್ನು ಗಮನಿಸಬೇಕು, ಪಾಲಿಸಬೇಕು ಮತ್ತು ಅನುಸರಿಸಬೇಕಿರುತ್ತದೆ.
10. ನಿಗದಿತ ವಿದ್ಯಾರ್ಹತೆ ಕನಿಷ್ಠ ಅರ್ಹತೆಯಾಗಿದ್ದು, ಅಭ್ಯರ್ಥಿಯು ಅದನ್ನು ಹೊಂದಿದ್ದಾರೆ ಎಂಬ ಮಾತ್ರಕ್ಕೆ ಲಿಖಿತ ಪರೀಕ್ಷೆಗೆ ಅವರನ್ನು ಕರೆಯಲು ಅರ್ಹತೆ ಇದೆ ಎಂದೇನಲ್ಲ.
11. ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಐಐಎಸ್ಸಿ ನೇಮಕಾತಿ ಪೋರ್ಟಲ್ ಮೂಲಕ ಮಾತ್ರ ಅರ್ಜಿ ಸಲ್ಲಿಸಬೇಕು. ಅಭ್ಯರ್ಥಿಯು ಆನ್‌ಲೈನ್‌ನಲ್ಲಿ ಸಲ್ಲಿಸಿದ ಅರ್ಜಿಯ ಪ್ರಿಂಟ್-ಔಟ್ ಅನ್ನು ತೆಗೆದುಕೊಳ್ಳಬೇಕು ಮತ್ತು ಭವಿಷ್ಯದ ಉಲ್ಲೇಖಕ್ಕಾಗಿ ಅದನ್ನು ತಮ್ಮ ಬಳಿ ಕಾದಿರಿಸಿಕೊಳ್ಳಬೇಕು.

12. ಸರ್ಕಾರಿ / ಪಿಎಸ್‌ಯು / ಸ್ವಾಯತ್ತ ಸಂಸ್ಥೆಗಳಲ್ಲಿ ಕೆಲಸ ಮಾಡುವ ಅಭ್ಯರ್ಥಿಗಳು ಪ್ರಸ್ತುತ ಉದ್ಯೋಗದಾತರಿಂದ ನಿರಾಕ್ಷೇಪಣಾ ಪತ್ರ (NOC) ಪಡೆದುಕೊಳ್ಳಬೇಕು ಮತ್ತು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಬೇಕು. ಒಂದುವೇಳೆ, ಪ್ರಮಾಣಪತ್ರಗಳ ಪರಿಶೀಲನೆಯ ಸಮಯದಲ್ಲಿ ಎನ್‌ಒಸಿ ಸಲ್ಲಿಸಲಾಗುವುದು ಎಂದು ಸಮರ್ಪಕವಾಗಿ ಸಹಿ ಮಾಡಿದ ಒಪ್ಪಂದವನ್ನು ಅಭ್ಯರ್ಥಿಯು ಅಪ್‌ಲೋಡ್ ಮಾಡಿದಲ್ಲಿ, ಎನ್‌ಒಸಿ ಇಲ್ಲದ ಅರ್ಜಿಯನ್ನು ಸಹ ಪರಿಗಣಿಸಲಾಗುತ್ತದೆ.

13. ಅಭ್ಯರ್ಥಿಗಳು ಕೊನೆಯ ದಿನಾಂಕದವರೆಗೆ ಕಾಯದೆ, ಮುಂಚಿತವಾಗಿ ಅರ್ಜಿಗಳನ್ನು ಸಲ್ಲಿಸಬೇಕು.

14. ಲಿಖಿತ ಪರೀಕ್ಷೆಗೆ ಹಾಜರಾಗಲು ಆಹ್ವಾನ ಪತ್ರಗಳನ್ನು ಅರ್ಹ ಅಭ್ಯರ್ಥಿಗಳಿಗೆ ಮಾತ್ರ ಕಳುಹಿಸಲಾಗುತ್ತದೆ ಮತ್ತು ಇ-ಮೇಲ್ ಮೂಲಕ ಮಾತ್ರ ಕಳುಹಿಸಲಾಗುತ್ತದೆ. ಅಭ್ಯರ್ಥಿಗಳು ತಮ್ಮ ನೋಂದಾಯಿತ ಇ-ಮೇಲ್ ಅನ್ನು ಆಗಾಗ್ಗೆ ಪರಿಶೀಲಿಸುತ್ತಿರಬೇಕು. ಲಿಖಿತ ಪರೀಕ್ಷೆಗೆ ಅರ್ಹತೆ ಹೊಂದಿರದ ಅರ್ಜಿದಾರರೊಂದಿಗೆ ಯಾವುದೇ ಪತ್ರ ವ್ಯವಹಾರವನ್ನು ಮಾಡಲಾಗುವುದಿಲ್ಲ.

15. ಯಾವುದೇ ಕಾರಣ ನೀಡದೆ ಯಾವುದೇ ಅರ್ಜಿಯನ್ನು ತಿರಸ್ಕರಿಸುವ ಹಕ್ಕನ್ನು ಸಂಸ್ಥೆ ಕಾಯ್ದಿರಿಸಿಕೊಂಡಿದೆ. ಯಾವುದೇ ಆಡಳಿತಾತ್ಮಕ ಕಾರಣದಿಂದ ಯಾವುದೇ ಹಂತದಲ್ಲಿ ಜಾಹೀರಾತು/ನೇಮಕಾತಿಯನ್ನು ರದ್ದುಗೊಳಿಸುವ ಹಕ್ಕನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ. ಈ ನಿಟ್ಟಿನಲ್ಲಿ ಯಾವುದೇ ಪತ್ರವ್ಯವಹಾರವನ್ನು ನಡೆಸಲಾಗುವುದಿಲ್ಲ.

16. ಅಭ್ಯರ್ಥಿಗಳು ತಮ್ಮ ಸ್ವಂತ ವೆಚ್ಚದಲ್ಲಿ ಲಿಖಿತ ಪರೀಕ್ಷೆಗೆ ಹಾಜರಾಗಬೇಕಾಗುತ್ತದೆ.

17. ಅಭ್ಯರ್ಥಿಯು ಸಲ್ಲಿಸಿದ ಪೂರ್ವಮಾಹಿತಿ ಮತ್ತು ದಾಖಲೆಗಳನ್ನು ಪರಿಶೀಲಿಸುವ ಹಕ್ಕನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ. ಅಭ್ಯರ್ಥಿಯು ಸಲ್ಲಿಸಿದ ದಾಖಲೆಗಳು ಅಸಲಿ ಅಲ್ಲ ಎಂದು ಕಂಡುಬಂದಲ್ಲಿ, ನಂತರದ ಪ್ರಕ್ರಿಯೆಯ ನಂತರ ಸೇವೆಗಳನ್ನು ಕೊನೆಗೊಳಿಸಲಾಗುತ್ತದೆ ಮತ್ತು ನೇಮಕಾತಿಯ ನಂತರವೂ ಅಂತಹ ಅಭ್ಯರ್ಥಿಗಳ ವಿರುದ್ಧ ಶಿಸ್ತು ಕ್ರಮ/ಕ್ರಿಮಿನಲ್ ಮೊಕದ್ದಮೆಗಳನ್ನು ಪ್ರಾರಂಭಿಸಲಾಗುತ್ತದೆ.

18. ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಸಲ್ಲಿಸಲು ನೇಮಕಾತಿ ಪೋರ್ಟಲ್ 07.02.2022 ರಿಂದ 28.02.2022 ರವರೆಗೆ ತೆರೆದಿರುತ್ತದೆ.

ಆಸಕ್ತರು ಅಧಿಸೂಚನೆ ಮತ್ತು ಇತರ ವಿವರಗಳಿಗಾಗಿ ಸಂಸ್ಥೆಯ ಜಾಲತಾಣ: https://iisc.ac.in/positions-open ಇಲ್ಲಿಗೆ ಭೇಟಿ ನೀಡಲು ಕೋರಲಾಗಿದೆ.

ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 28.02.2022.

**ದಿನಾಂಕ: 07.02.2022** **ಕುಲ ಸಚಿವರು**